**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂಃ ನ್ಯಾಯಾಲಯ, ಮದ್ದೂರು.**

**ಸಿ.ಸಿ.137/2020**

| | | |
|---|---|---|
| ಸಾಕ್ಷಿದಾರರ ಹೆಸರು | - ಆಶಾ | ಚಾ ಸಾ -7 |
| ಗಂಡನ ಹೆಸರು | - ನಿಂಗಪ್ಪ | ಫ್ರಾ ಸಾ -7 |
| ವಯಸ್ಸು | - 30 ವರ್ಷ | |
| ಉದ್ಯೋಗ | - ಗೃಹಿಣಿ | |
| ವಾಸ ಸ್ಥಳ | - ಶ್ರೀರಂಗಪಟ್ಟಣ | |

ದಿನಾಂಕಃ 05.02.2024 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:ಅಭಿಯೋಜನೆಯ ಪರಃ ಎಪಿಪಿ ಯವರಿಂದ:**

ಸುಮಾರು 5-6 ವರ್ಷಗಳಿಂದ ನಾನು ಒಂದು ದಿನ ಗೆಜ್ಜಲಗೆರೆ ಗಾರ್ಮೆಂಟ್ಸ್ ನಲ್ಲಿ ಕೆಲಸ ಮುಗಿಸಿಕೊಂಡು ಮಂಡ್ಯಕ್ಕೆ ಖಾಸಗೀ ಬಸ್ಸಿನಲ್ಲಿ ಹೋಗುತ್ತಿದ್ದೇನು. ಒಂದು ಸರ್ಕಾರಿ ಬಸ್ಸು ನಮ್ಮ ಖಾಸಗೀ ಬಸ್ಸಿಗೆ ಹಿಂದಿನಿಂದ ಬಂದು ಡಿಕ್ಕಿ ಪಡಿಸಿರುತ್ತದೆ. ನನಗೆ ಹಾಗೂ ನಮ್ಮ ಊರಿನ ಇನ್ನಿಬ್ಬರಿಗೆ ಗಾಯಗಳಾಗಿರುತ್ತದೆ. ನನಗೆ ತಲೆಗೆ ಏಟಾಗಿರುತ್ತದೆ. ಯಾರ ತಪ್ಪಿನಿಂದ ಅಪಘಾತವಾಗಿದೆ ಎಂದು ನನಗೆ ಗೊತ್ತಿಲ್ಲ. ನಾನು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ.

**(ಈ ಹಂತದಲ್ಲಿ ಮಾನ್ಯ ಎ ಪಿ ಪಿ ಯವರು ಸದರಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಲು ಅನುಮತಿ ಕೋರಿರುತ್ತಾರೆ. ಅನುಮತಿ ನೀಡಲಾಯಿತು.)**

**ಪಾಟೀ ಸವಾಲುಃ ಮಾನ್ಯ ಎ ಪಿ ಪಿ ಯವರಿಂದಃ**

ದಿ. 12.09.2018 ರಂದು ನಾನು ಗೆಜ್ಜಲಗೆರೆ ಗಾರ್ಮೆಂಟ್ಸ್ ನಲ್ಲಿ ಕೆಲಸ ಮುಗಿಸಿಕೊಂಡು ಮಂಡ್ಯಕ್ಕೆ ಕೆಎ-51-3333 ಖಾಸಗೀ ಬಸ್ಸಿನಲ್ಲಿ ಹೋಗುತ್ತಿದ್ದಾಗ ಸಂಜೆ ಸುಮಾರು 6.00 ಗಂಟೆ ಸಮಯದಲ್ಲಿ ಕೆಎ-09-ಎಫ್5180 ಕೆ ಎಸ್ ಆರ್ ಟಿ ಸಿ ಬಸ್ಸು ಚಾಲಕನ್ನು ತನ್ನ ಬಸ್ಸನ್ನು ಅತಿ ವೇಗ ಹಾಗೂ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ನಮ್ಮ ಬಸ್ಸಿನ ಹಿಂಭಾಗಕ್ಕೆ ಡಿಕ್ಕಿ ಪಡಿಸಿ ಅಪಘಾತ ಅಗಿರುತ್ತದೆ ಹಾಗೂ ಸದರಿ ಕೆ ಎಸ್

ಆರ್ ಟಿ ಸಿ ಬಸ್ಸಿನ ಮುಂಭಾಗಕ್ಕೆ ಕೆಎ-53-ಎಂಸಿ-9999 ಇನ್ನೋವಾ ಕಾರು ಡಿಕ್ಕಿ ಪಡಿಸಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ಸದರಿ ಅಪಘಾತಕ್ಕೆ ಆರೋಪಿಯ ಅತಿವೇಗ ಮತ್ತು ಅಜಾಗರುಕತೆ ಕಾರಣ ಎಂದರೆ ಸರಿಯಲ್ಲ. ಆರೋಪಿಯೇ ಆ ದಿನ ಕೆ ಎಸ್ ಆರ್ ಟಿ ಸಿ ಬಸ್ಸನ್ನು ಚಾಲನೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಾನು ದಿ.13.09.2018 ರಂದು ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಹೇಳಿಕೆಯ ಸದರಿ ಭಾಗವನ್ನು ನಿಪಿ-4 ಎಂದು ಗುರುತಿಸಲಾಯಿತು.

ನನಗೆ ನಿಪಿ-4 ರ ಎಲ್ಲಾ ವಿಚಾರ ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿತರ ಪರ ಮಾನ್ಯ ಶ್ರೀ. ಎಂ ಎಂ ಎಂ ವಕೀಲರಿಂದಃ**

ಏನು ಇಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ